ಒ.ಎಸ್.ನಂ:171/2018
ಪಿ.ಡಬ್ಲೂ.1

**ದಿ:04.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ಪ್ರತಿವಾದಿ ಪರ ಶ್ರೀ.**Y.H.,** ವಕೀಲರಿಂದ:-

ನನ್ನ ತಂದೆ ಹೆಸರು ವೆಂಕಟಪ್ಪ ಇರುತ್ತದೆ . ನಾವು ಮೂಲತಃ ಬಿದರಕೆರೆ ಗೊಲ್ಲರಹಟ್ಟಿ ಗ್ರಾಮ ಇರುತ್ತದೆ . ನನ್ನ ಹೆಂಡತಿ ಹೆಸರು ಸರೋಜಮ್ಮ . ನನ್ನ ಹೆಂಡತಿ ಅವರ ತವರು ಮನೆ ಬುಳ್ಳನಹಳ್ಳಿ ಗ್ರಾಮ ಇರುತ್ತದೆ . ನನಗೆ ಮದುವೆ ಆಗಿ 10 ವರ್ಷ ಕಳೆದಿರುತ್ತದೆ . ನನಗೆ ಮೂರು ಜನ ಮಕ್ಕಳು ಇರುತ್ತಾರೆ . ಅವರ ಹೆಸರು ಚೈತ್ರ , ಆದಿತ್ಯ ಮತ್ತು ಗಣೇಶ್ ಇರುತ್ತದೆ . ನನ್ನ ಮಗಳು ಚೈತ್ರ ರವರು ಸನ್ 2004 ರಲ್ಲಿ ಹುಟ್ಟಿರುತ್ತಾರೆ. ನನಗೆ ಆದಿತ್ಯ ಮತ್ತು ಗಣೇಶ್ ಮಕ್ಕಳ ಜನ್ಮ ದಿನಾಂಕ ಹೇಳಲು ಬರುವುದಿಲ್ಲ . ನನಗೂ ಮತ್ತು ಪ್ರತಿವಾದಿ 1 ರಿಂದ 5 ರವರಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿ. ನನ್ನ ಹೆಂಡತಿ ಸರೋಜಮ್ಮ ಮತ್ತು ಪ್ರತಿವಾದಿ 1 ರಿಂದ 5 ರವರಿಗೂ ಸಹ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿ. ವಾದಿ 2 ರವರನ್ನು ಮೂಲ ವಾದಿ ಕಮಲಮ್ಮ ಎಂಬುವವರು ದತ್ತು ಪಡೆದುಕೊಂಡಿರುತ್ತಾರೆ , ಸದರಿ ಕಮಲಮ್ಮ ರವರು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ತಮ್ಮ ಹೆಸರಿಗೆ ಜಮೀನು ಮಾಡಿಸಿಕೊಳ್ಳಲು ಸಲ್ಲಿಸಿರುತ್ತಾರೆ . ನನಗೂ ಮತ್ತು ಮೂಲ ವಾದಿ ಕಮಲಮ್ಮ ರವರಿಗೆ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿ. ವೆಂಕಟಪ್ಪ ತಂದೆ ಲೇಟ್ ದೊಡ್ಡ ಅಂಜಿನಪ್ಪ ರವರು ಪ್ರತಿವಾದಿ 1 ರಿಂದ 5 ರವರ ಮೂಲ ಪುರುಷ ಇರುತ್ತಾರೆ ಎಂದರೆ ಸರಿ. ಸದರಿ ವೆಂಕಟಪ್ಪ ರವರ ಹೆಂಡತಿ ಹನುಮಕ್ಕ ಇರುತ್ತಾರೆ ಎಂದರೆ ಸರಿ. ಅವರಿಗೆ ಈರಪ್ಪ ಮತ್ತು ತಿಪ್ಪೇಸ್ವಾಮಿ ಇಬ್ಬರು ಮಾತ್ರ ಗಂಡು ಮಕ್ಕಳು ಮತ್ತು ಈರಮ್ಮ , ದೊಡ್ಡ ಅಂಜಿನಪ್ಪ , ಸಾಕಮ್ಮ, ಸಣ್ಣ ಅಂಜಿನಪ್ಪ ಮತ್ತು ತಿಪ್ಪಕ್ಕ ಎಂಬ 5 ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ನಾನು ವಾದಿ 2 ರವರನ್ನು ಸದರಿ ವೆಂಕಟಪ್ಪರವ ಕುಟುಂಬದವರನ್ನು ದತ್ತು ನೀಡುವ ಸಂದರ್ಬದಲ್ಲಿ ಮಾತುಕತೆ ಮಾಡಿರುವುದಿಲ್ಲ . ಸಾಕ್ಷಿ ಮುಂದುವರೆಸಿ ಮೂಲ ವಾದಿ ಕಮಲಮ್ಮ ರವರ ಕೋರಿಕೆ ಮೇಲೆ ನೀಡಿರುತ್ತೇನೆ . ಮೂಲ ವಾದಿ ಕಮಲಮ್ಮ ಮತ್ತು ವೆಂಕಟಪ್ಪ ರವರ ಕುಟುಂಬದ ನಡುವೆ ಗಲಾಟೆ ಆಗಿರುತ್ತದೆ . ಸದರಿ ಗಲಾಟೆ ಬಗ್ಗೆ ನನಗೆ ನಿಖರವಾಗಿ

ಮಾಹಿತಿ ಗೊತ್ತಿರುವುದಿಲ್ಲ . ದತ್ತು ಕೋಡುವಾಗ ಯಾವ ಪದ್ದತಿಯಲ್ಲಿ ನೀಡಿರುತ್ತೀರ ಎಂದರೆ ಸಾಕ್ಷಿ ರಿಜಿಸ್ಟರ್ ಮೂಲಕ ಮಾಡಿಸಿರುತ್ತೇವೆ ಎಂದು ಹೇಳುತ್ತಾರೆ . ಸಾಕ್ಷಿ ಮುಂದುವರೆಸಿ ಯಾವುದೇ ಪದ್ದತಿ ಪಾಲಿಸಿರುವುದಿಲ್ಲ ಎಂದು ಹೇಳುತ್ತಾರೆ . ವಾದಿ 2 ಚೈತ್ರ ರವರಿಗೆ 16 ವರ್ಷ ಆಗಿರುತ್ತದೆ .

( ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು , ಆಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು